ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರ ಸ್ಥಾನ

ವಿಮಲ ರಾಮಚಂದ್ರನ್

ಕಳೆದ ಹದಿನೈದು ವರ್ಷಗಳಿಂದ ನಾನು "ಶಿಕ್ಷಕ" ಎನ್ನುವ ಪ್ರಶ್ನೆಯೊಂದಿಗೆ ಗುದ್ದಾಡುತ್ತಲೇ ಬಂದಿದ್ದೇನೆ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರ ಕುರಿತ ಚರ್ಚೆಯು ದುರದೃಷ್ಟವಶಾತ್ ಧ್ರುವೀಕರಣಗೊಂಡಿದೆ. ಆಡಳಿತಗಾರರು, ಸಂಶೋಧಕರು ಮತ್ತು ಲೇಖಕ/(ರನ್ನು ಒಳಗೊಂಡಂತಹ) ಒಂದು ದೊಡ್ಡ ಸಮುದಾಯ "ಶಿಕ್ಷಕರ ಜರೆಯುವಿಕೆ " ಎನ್ನುವ ಕಡೆಗಿದ್ದರೆ, ಅಷ್ಟೇ ಪ್ರಮಾಣದ ಉಳಿದ ಸಮುದಾಯ ಅದಕ್ಕೆ ತದ್ವಿರುದ್ಧವಾದ ದೃಷ್ಟಿಕೋನವನ್ನು ಹೊಂದಿದೆ. ಈ ಪುಟ್ಟ ಲೇಖನದ ಉದ್ದೇಶ ನಮ್ಮ ವ್ಯವಸ್ಥೆಯಲ್ಲಿ ಶಿಕ್ಷಕರನ್ನು ಯಾವ ಸ್ಥಾನದಲ್ಲಿಡಲಾಗಿದೆ ಮತ್ತು ಇದು ಎಷ್ಟು ಮುಖ್ಯ ಎನ್ನುವುದನ್ನು ಅರಿಯುವುದು.

ನಮಗೆಲ್ಲ ತಿಳಿದಿರುವಂತೆ ಪ್ರಮಾಣ, ಗುಣಮಟ್ಟ ಹಾಗೂ ಸಮತೆಯ ನಡುವಿನ ಸಂಘರ್ಷದಲ್ಲಿ ಸಾರ್ವಜನಿಕ ವ್ಯವಸ್ಥೆಯನ್ನು ಬದಲಿಸುವಲ್ಲಿ ಶಿಕ್ಷಕರು ಮುಖ್ಯ ಪಾತ್ರವಹಿಸುತ್ತಾರೆ. ಕಳೆದ ಮೂರುದಶಕಗಳ ಅನುಭವ ಮತ್ತು ಸಂಶೋಧನೆಯು ಸಂಖ್ಯೆ ಮುಖ್ಯವಲ್ಲ ಎಂದು ತೋರಿಸುತ್ತಿವೆ. ಶಿಕ್ಷಕರ ಪ್ರಭಾವ ಹೇಗಿರುತ್ತದೆಯೆಂದರೆ " ಶಾಲಾ ಆಧಾರಿತ ಕಲಿಕೆಯಲ್ಲಿ ವಿದ್ಯಾರ್ಥಿಯ ಕಲಿಕೆ ಶಿಕ್ಷಕರನ್ನು ಆಧರಿಸಿರುತ್ತದೆ. ಸತತವಾಗಿ ಹಲವು ವರ್ಷಗಳ ಉತ್ತಮ ಬೋಧನೆಯು ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಕಲಿಕೆಯನ್ನು ಸುಧಾರಿಸಬಲ್ಲುದು…" (**Vegas and Ganimian, 2011** ). ಜಾಗತಿಕವಾಗಿ ಹಲವು ದೇಶಗಳಲ್ಲಿ ಎದುರಿಸುತ್ತಿರುವ ಮುಖ್ಯ ಸವಾಲು ಪರಿಣಾಮಕಾರಿ ಶಿಕ್ಷಕರ ಕುರಿತಾಗಿದೆ. ಇದು ಸ್ಪರ್ಧೆ (ವಿದ್ಯಾರ್ಹತೆ/ತಿಳುವಳಿಕೆ), ಸ್ಫೂರ್ತಿ ಮತ್ತು ನಿರ್ವಹಣೆಯನ್ನು ಒಳಗೊಂಡಿರುತ್ತದೆ. ಅಂತಿಮವಾಗಿ ಹಗ್ಗ ಜಗ್ಗಾಟವೇ ಮಕ್ಕಳ ಹಕ್ಕುಗಳು (ಗುಣಮಟ್ಟದ ಶಿಕ್ಷಣ ಪಡೆಯುವುದು), ಶಿಕ್ಷಕರ ಹಕ್ಕುಗಳು (ಕೆಲಸದ ಪರಿಸ್ಥಿತಿಗಳು) ಮತ್ತು ಇವೆರಡನ್ನೂ ಸಮತೋಲನ ಸ್ಥಿತಿಯಲ್ಲಿಡುವ ವ್ಯವಸ್ಥೆಯ ಸಾಮರ್ಥ್ಯ (**Cream Wright in Chikondi Mpokosa and Susy Ndaruhutse, 2003**) ಇವುಗಳ ನಡುವೆ.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರ ಕೆಲಸದ ಪರಿಸ್ಥಿತಿಗಳ ಕುರಿತು ನಡೆಸುತ್ತಿರುವ ಸಂಶೋಧನೆಯ ಸಲುವಾಗಿ ಕಳೆದ ಮೂರು ವರ್ಷಗಳಲ್ಲಿ ನಾನು ಬಹಳಷ್ಟು ಸುತ್ತಾಡಿ ಹಲವಾರು ಶಿಕ್ಷಕರನ್ನು ಹಾಗೂ ಆಡಳಿತವರ್ಗದವರನ್ನು ಭೇಟಿ ಮಾಡಿದ್ದೇನೆ. ನನ್ನ ಅನುಭವಕ್ಕೆ ಬಂದ ಸಂಗತಿಯೆಂದರೆ ಸಾರ್ವಜನಿಕ ವ್ಯವಸ್ಥೆಯ ದೃಷ್ಟಿಯಲ್ಲಿ ಶಿಕ್ಷಕರೆಂದರೆ ಸರ್ಕಾರಿ ನೌಕರರು ಹಾಗೂ ಅವರ ಮೂಲ ನಿಷ್ಠೆ ಏನಿದ್ದರೂ ಆಡಳಿತಕ್ಕೆ ಮಾತ್ರ. ಆಕೆ/ಆತ ಮಕ್ಕಳಿಗೆ ಶಿಕ್ಷಣ ನೀಡುವ ಹಾಗೂ ಕಾಳಜಿ ತೋರುವುದರಲ್ಲಿ ನಿರತರಾಗಿರುವ 'ಶಿಕ್ಷಕ'ರು ಎಂದು ಅವರನ್ನು ಪರಿಗಣಿಸುವುದಿಲ್ಲ. ಸಮಾಜದಲ್ಲಿ ಶಿಕ್ಷಕರಿಗಿದ್ದ ವಿಶಿಷ್ಟ ಸ್ಥಾನಮಾನ ಕ್ರಮೇಣ ನಾಶವಾಗುತ್ತಿದೆ ಹಾಗೂ ದೇಶದಾದ್ಯಂತ ಶಿಕ್ಷಕರು ತಮ್ಮ ವೃತ್ತಿ ಅಸ್ತಿತ್ವ ಕಳೆದುಹೋಗಿದೆ ಎಂದೇ ಹೇಳುತ್ತಾರೆ.

ಶಿಕ್ಷಕರ ನೇಮಕಾತಿ, ವರ್ಗಾವಣೆ ಹಾಗೂ ನಿರ್ವಹಣೆ ಇವೆಲ್ಲ ಆಡಳಿತಗಾರರು ಮತ್ತು ರಾಜಕಾರಣಿಗಳ ಮರ್ಜಿಯನ್ನು ಅವಲಂಬಿಸಿರುವುದರಿಂದ ಇವರ ಪರಿಸ್ಥಿತಿ ಅತಿಸೂಕ್ಷ್ಮವಾಗಿರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ದೇಶದಾದ್ಯಂತ ಶಿಕ್ಷಕರು ಹೇಳುವುದು ಅವರಿಗೆ ಯಾವುದೇ ರೀತಿಯ ಸ್ವಾತಂತ್ರ್ಯವಿಲ್ಲವೆಂದು ಹಾಗೂ ಆಡಳಿತ ವರ್ಗದ ಉನ್ನತ ಸ್ಥಾನದಲ್ಲಿರುವವರಿಗೆ ತಮ್ಮ ಆದೇಶಗಳನ್ನು ಶಿಕ್ಷಕರು ಮರುಮಾತಿಲ್ಲದೆ ಪಾಲಿಸಿದರೆ ಸಂತೋಷವಾಗುತ್ತದೆ. ಶಿಕ್ಷಕರ ಸ್ವಾತಂತ್ರ್ಯ, ಸ್ವಂತಿಕೆ, ಪ್ರೇರಣೆ ಹಾಗೂ ಹೊಣೆಗಾರಿಕೆಗಳು ಒಂದರೊಳಗೊಂದು ಹೆಣೆದುಕೊಂಡಿರುವ ಜಾಗತಿಕ ಪುರಾವೆಯು ನಿಚ್ಚಳವಾಗಿ ತೋರುತ್ತಿರುವ ಈ ಸಂದರ್ಭದಲ್ಲಿ ನಿಜವಾಗಿಯೂ ಇದೊಂದು ದುರಂತ ಪರಿಸ್ಥಿತಿ.

ಎಲ್ಲ ದೇಶಗಳಲ್ಲೂ ಇದೇ ಪರಿಸ್ಥಿತಿ ಇದೆಯೇ? ಪೋಲ್ಯಾಂಡ್, ಫಿನ್ಲ್ಯಾಂಡ್, ಚೈನಾ, ಸಿಂಗಪೂರ ಮತ್ತು ಚಿಲಿಯಂತಹ ದೇಶಗಳ ಅನುಭವವನ್ನು ನೋಡಿದಾಗ ನಮಗೆ ತಿಳಿದು ಬರುವುದೇನೆಂದರೆ ವ್ಯವಸ್ಥೆಯಲ್ಲಿ ಶಿಕ್ಷಕರಿಗೆ ನೀಡಿರುವ ಸ್ಥಾನದಲ್ಲಿಯೇ ಯಶಸ್ಸಿನ ಸೂತ್ರ ಅಡಗಿದೆ. ಈ ದೇಶಗಳಲ್ಲಿ ಪಾಲಿಸಲಾಗುವ ಕೆಲವು ಮುಖ್ಯ ತತ್ವಗಳಿಂದಾಗಿ ಅಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲಾಗಿದೆ. ಅವುಗಳೆಂದರೆ –

- ವೃತ್ತಿಪರ ಅನನ್ಯತೆ ಹಾಗೂ ಕೆಲಸದ ಪರಿಸ್ಥಿತಿಗಳನ್ನು ಉತ್ತಮಗೊಳಿಸುವ ಸಲುವಾಗಿ ಹಲವು ತಂತ್ರಗಳನ್ನು ಬಳಸಿ ಅತ್ಯುತ್ತಮ ಅಭ್ಯರ್ಥಿಗಳನ್ನು ಶಿಕ್ಷಕ ವೃತ್ತಿಗೆ ಸೆಳೆಯಲಾಗುತ್ತಿದೆ. ಕೇವಲ ಶಿಕ್ಷಕರ ಸಂಬಳವನ್ನು ಹೆಚ್ಚಿಸಿದರೆ ಮಾತ್ರ ಸಾಲದು.

- ತರಗತಿಗಳಲ್ಲಿ ಅಗತ್ಯವಿರುವ ಜ್ಞಾನ ಹಾಗೂ ಕೌಶಲಗಳನ್ನು ಗಳಿಸುವಂತೆ ಶಿಕ್ಷಕರನ್ನು ಸಿದ್ಧಗೊಳಿಸುವುದು. ಅಗತ್ಯದ ಆಧಾರದ ಮೇಲೆ ಶಿಕ್ಷಣದ ಮುಂದುವರಿಕೆ ಹಾಗೂ ತರಬೇತಿ ಪಡೆಯಲು ಅವಕಾಶಗಳನ್ನು ಒದಗಿಸುವುದು. ಶಿಕ್ಷಕರಿಗೆ ತಮ್ಮ ಕಲಿಕೆಯ ಅಗತ್ಯಗಳನ್ನು ಗುರುತಿಸಲು ನೆರವು ನೀಡುವುದು ಹಾಗೂ ಸಮಯಕ್ಕೆ ತಕ್ಕ ಅವಕಾಶಗಳನ್ನು ಒದಗಿಸುವುದನ್ನು ಮುಖ್ಯವೆಂದು ಪರಿಗಣಿಸಲಾಗಿದೆ.

- ಶಿಕ್ಷಕರಿಂದ ಏನನ್ನು ನಿರೀಕ್ಷಿಸಲಾಗುತ್ತಿದೆ ಎನ್ನುವುದನ್ನು ಸ್ಪಷ್ಟಗೊಳಿಸುವುದು ಹಾಗೂ ಆ ನಿರೀಕ್ಷೆಯನ್ನು ನಿರಂತರವಾಗಿ ಉಳಿಸಿಕೊಳ್ಳುವುದು. ಈ ನಿರೀಕ್ಷೆಯಲ್ಲಿ ಆಗಾಗ ಬದಲಾವಣೆ ಮಾಡುತ್ತಿದ್ದರೆ ಶಿಕ್ಷಕರ ನೈತಿಕತೆಯ ಮೇಲೆ ಅಹಿತಕರ ಪರಿಣಾಮ ಬೀರಬಲ್ಲುದು. ಶಿಕ್ಷಕರು, ಮುಖ್ಯೋಪಾಧ್ಯಾಯರು ಮತ್ತು ಆಡಳಿತಗಾರರಿಗೆ ಪಾರದರ್ಶಕ ವ್ಯವಸ್ಥೆಯನ್ನು ರೂಪಿಸುವ ಮೂಲಕ ಅವರಿಗೆ ತಮ್ಮ ಪ್ರಗತಿ/ಸಾಧನೆಯ ಮೌಲ್ಯಮಾಪನ ಮತ್ತು ವಿಮರ್ಶೆ ಮಾಡಿಕೊಳ್ಳಲು ಸಾಧ್ಯವಾಗುವಂತೆ ಮಾಡುವುದು.

• ವೃತ್ತಿಪರ ಸ್ವಾತಂತ್ರ್ಯವನ್ನು ಹೊಂದಿರುವ ತಮ್ಮ ಶಾಲೆಯ ಕುರಿತು ಯೋಚಿಸುವ ಧೃಡ ವ್ಯಕ್ತಿತ್ವದ ಮುಖ್ಯೋಪಾಧ್ಯಯರು ಅಥವ ಪ್ರಾಂಶುಪಾಲರು ವಿದ್ಯಾರ್ಥಿಗಳ ಅಗತ್ಯಕ್ಕೆ ತಕ್ಕಂತೆ ಶಿಕ್ಷಕರ ಕೌಶಲ್ಯಗಳನ್ನು ಜೋಡಿಸುತ್ತಾರೆ. ಈ ರೀತಿಯ ಧೃಡ ಹಾಗೂ ಸ್ಫೂರ್ತಿದಾಯಕ ವ್ಯಕ್ತಿತ್ವ ಹೊಂದಿರುವ ಶಾಲಾ ಮುಖ್ಯಸ್ಥರನ್ನು ಹೊಂದಿರುವ ಶಿಕ್ಷಕರು, ತರಗತಿಗಳಲ್ಲಿ ಅದ್ಭುತಗಳನ್ನು ಸೃಷ್ಟಿಸಬಲ್ಲಂತಹ ಹೊಸ ಸಂಶೋಧನೆಗಳನ್ನು ಅನ್ವೇಷಣೆಗಳನ್ನು ಮಾಡುವ ಸ್ವಾತಂತ್ರ್ಯವನ್ನು ಪಡೆಯುತ್ತಾರೆ. ಅವರು ಸ್ವಪ್ರೇರಣೆಯಿಂದ ತಮ್ಮ ಕೆಲಸವನ್ನು ಅಭಿಮಾನದಿಂದ ಮಾಡುತ್ತಾರೆ.

• ಅಂತಿಮವಾದ ಹಾಗೂ ಅತಿಮುಖ್ಯವಾದ ಅಂಶವೆಂದರೆ ವಿದ್ಯಾರ್ಥಿಗಳ ಕಲಿಕೆಯಲ್ಲಿ ಶಿಕ್ಷಕರು ನಿರಂತರವಾಗಿ ಪಾಲ್ಗೊಂಡು ಪ್ರತಿ ಮಗುವು ಪ್ರಗತಿ ಹೊಂದುವಂತೆ ನೆರವು ನೀಡುವಂತೆ ಮಾಡುವುದು.

ದುರದೃಷ್ಟವಶಾತ್ ಭಾರತದ ಸಾರ್ವಜನಿಕ ವ್ಯವಸ್ಥೆಯು ಸಮಸ್ಯೆಗಳಿಂದ ತುಂಬಿಹೋಗಿದೆ. ಶಿಕ್ಷಕ ನೇಮಕಾತಿ ನೀತಿಗಳು ಪೂರ್ವಾಲೋಚನೆಯಿಲ್ಲದೆ ಆ ಹೊತ್ತಿನ ಉದ್ದೇಶಕಕ್ಕಾಗಿ ಮಾತ್ರ ಮಾಡಿರುವಂತಹ ನಿರ್ಧಾರಗಳಾಗಿರುತ್ತವೆ ಹಾಗೂ ಆಯ್ಕೆ ಮತ್ತು ನೇಮಕಾತಿಯ ನಡುವೆ ಬಹಳ ದಿನಗಳ ಅಂತರವಿರುತ್ತದೆಯಾದ್ದರಿಂದ ಅರ್ಹ ಅಭ್ಯರ್ಥಿಯು ಶಿಕ್ಷಕ ವೃತ್ತಿಗೆ ಸೇರಲು ಬಹಳ ತಡವಾಗುತ್ತದೆ (ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳನ್ನು ಹೊರತುಪಡಿಸಿ). ಹಲವು ರಾಜ್ಯಗಳು ಎಷ್ಟು ಶಿಕ್ಷಕರ ಅಗತ್ಯವಿದೆ ಎನ್ನುವುದನ್ನು ಲೆಕ್ಕಹಾಕುವ, ಅವರ ವಿದ್ಯಾರ್ಹತೆ ಅಥವಾ ಗುಣಲಕ್ಷಣಗಳು ಏನಿರಬೇಕು ಎಂದು ಸ್ಪಷ್ಟಗೊಳಿಸುವ ವ್ಯವಸ್ಥಿತವಾದ ಯಾವುದೇ ಪ್ರಕ್ರಿಯೆಯನ್ನು ಒಳಗೊಂಡಿಲ್ಲ. ಕೆಲವು ರಾಜ್ಯಗಳಲ್ಲಿ, ನೇಮಕಾತಿಯನ್ನು ರಾಜಕೀಯ ಆಸಕ್ತಿಗಳಿಗೆ ಅನುಗುಣವಾಗಿ ನಿರ್ಧರಿಸಲಾಗುತ್ತವೆಯಾದ್ದರಿಂದ ನೇಮಕಾತಿ ಪ್ರಕ್ರಿಯೆಯು ರಾಜಕೀಯ ತಂತ್ರಗಾರಿಕೆಯನ್ನು ಹೆಚ್ಚು ಹೋಲುತ್ತದಯೆ ಹೊರತು ನೇಮಕಾತಿ ನೀತಿಗಳನ್ನಲ್ಲ. ನೇಮಕಾತಿ ಕೂಡ ಪಾರದರ್ಶಕವಾಗಿರುವುದಿಲ್ಲ. ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಹಲವು ಪ್ರಕರಣಗಳು ನ್ಯಾಯಾಲಯದಲ್ಲಿದ್ದು, ಅರ್ಹ ಶಿಕ್ಷಕ ಅಭ್ಯರ್ಥಿಗಳಲ್ಲಿ ಇದು ಅಭದ್ರತೆಯನ್ನು ಸೃಷ್ಟಿಸುತ್ತದೆ. ಪಾರದರ್ಶಕವಾಗಿ ಅರ್ಹತೆ ಆಧಾರಿತವಾಗಿ ನೇಮಕಾತಿ ಮಾಡುವ ರಾಜ್ಯಗಳಲ್ಲಿ ಕೂಡ (ಕರ್ನಾಟಕ, ತಮಿಳುನಾಡು) ಶಾಲೆಗಳಿಗೆ ಶಿಕ್ಷಕರು ನೇಮಕಗೊಂಡು ಕೆಲಸಕ್ಕೆ ಹಾಜರಾಗುವುದು ತಡವಾಗಿ.

ಭಾರತದಲ್ಲಿ ವರ್ಗಾವಣೆಯ ನೀತಿಗಳು ವಿರಳ. ಇತ್ತೀಚೆಗಷ್ಟೇ ಅವು ಕೆಲವೆಡೆ ಬಂದಿವೆ (ನಮ್ಮ ಅಧ್ಯಯನದ ಪ್ರಕಾರ ಕರ್ನಾಟಕ ಮತ್ತು ತಮಿಳುನಾಡು). ಹಲವು ರಾಜ್ಯಗಳಲ್ಲಿನ ಪರಿಸ್ಥಿತಿ ಆತಂಕಕಾರಿಯಾಗಿದೆ – ಅವತ್ತವತ್ತಿಗೆ ಮಾಡಿರುವಂತಹವು. ಹಲವು ರಾಜ್ಯಗಳಲ್ಲಿ ವರ್ಗಾವಣೆ ಅಗತ್ಯವಿರುವ ಶಿಕ್ಷಕರು ತಮ್ಮ ಆಯ್ಕೆಯ ಸ್ಥಳಗಳಿಗೆ ವರ್ಗಾವಣೆ ಮಾಡಿಸಿಕೊಳ್ಳಲು (ಅಥವಾ ಅವರ ಆಯ್ಕೆಯ ವಿರುದ್ಧ ತಡೆಯೊಡ್ಡುವ) ಅಥವ ಶೀಘ್ರವಾಗಿ ವರ್ಗಾವಣೆ ಮಾಡಿಸಿಕೊಳ್ಳುವ

ಸಲುವಾಗಿ ವಶೀಲಿ ಅಥವಾ ಲಂಚದ ಮೊರೆ ಹೋಗುತ್ತಾರೆ. ಕೆಲವು ರಾಜ್ಯಗಳಲ್ಲಿ ವರ್ಗಾವಣೆ ಸಮಿತಿಗಳಲ್ಲಿ ಔಪಚಾರಿಕವಾಗಿ ರಾಜಕೀಯ ನಾಯಕರು ಪ್ರತಿನಿಧಿಗಳಾಗಿರುತ್ತಾರೆ ಮತ್ತು ಕೆಲವು ವರ್ಗಾವಣೆಗಳನ್ನು ರಾಜಕೀಯವಾಗಿ ಸಹಾಯಮಾಡಬಲ್ಲ ಶಿಕ್ಷಕರಿಗೆ ಪ್ರತಿಫಲವಾಗಿ ನೀಡಲಾಗುತ್ತದೆ. ಕೆಲವು ರಾಜ್ಯಗಳಲ್ಲಿ ಸಾಮೂಹಿಕ ವರ್ಗಾವಣೆಯನ್ನು ಮಾಡಲಾಗುತ್ತದೆ – ಇದು ಶಿಕ್ಷಕರಲ್ಲಿ ಆತಂಕಕಾರಿ ಚಟುವಟಿಕೆಗಳಿಗೆ ಎಡೆಮಾಡಿಕೊಡುತ್ತದೆ.

ಆರ್‌ಟಿಇ ಕಾಯ್ದೆಯ ಅನ್ವಯ ಇವು ಶಿಕ್ಷಕರ ಕರ್ತವ್ಯಗಳು : (೧) ನಿಯಮಿತವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಶಾಲೆಗೆ ಹಾಜರಾಗಬೇಕು; (೨) ಪಠ್ಯಕ್ರಮವನ್ನು ಸರಿಯಾಗಿ ನಿರ್ವಹಿಸಿ ಪೂರ್ಣಗೊಳಿಸಬೇಕು; (೩) ನಿರ್ದಿಷ್ಟ ಸಮಯದೊಳಗೆ ಪಠ್ಯಕ್ರಮವನ್ನು ಪೂರ್ಣಗೊಳಿಸಬೇಕು; (೪) ಪ್ರತಿ ಮಗುವಿನ ಕಲಿಕೆಯ ಸಾಮರ್ಥ್ಯವನ್ನು ಅರಿತು ಅದಕ್ಕೆ ತಕ್ಕಹಾಗೆ ಅಗತ್ಯವಿದ್ದಲ್ಲಿ ಪೂರಕ ಸೂಚನೆಗಳನ್ನು ನೀಡಬೇಕು; (೫) ತಂದೆತಾಯಿಗಳು ಮತ್ತು ಪೋಷಕರೊಂದಿಗೆ ನಿರಂತರ ಭೇಟಿಗಳನ್ನು ಏರ್ಪಡಿಸಿಕೊಂಡು ಮಗುವಿನ ಹಾಜರಾತಿ, ಕಲಿಕೆಯ ಸಾಮರ್ಥ್ಯ, ಕಲಿಕೆಯಲ್ಲಿ ಸಾಧಿಸಿದ ಪ್ರಗತಿ ಹಾಗೂ ಇನ್ನಿತರ ಸಂಬಂಧಿಸಿದ ಮಾಹಿತಿಗಳನ್ನು ಅವರಿಗೆ ತಿಳಿಯಪಡಿಸಬೇಕು ; (೬) ಇದೇ ರೀತಿ ಹೇಳಿರುವ ಇನ್ನಿತರ ಕರ್ತವ್ಯಗಳನ್ನು ನಿಭಾಯಿಸಬೇಕು. ಹೇಳಲಾಗಿರುವ ಈ ಎಲ್ಲ ಕರ್ತವ್ಯಗಳನ್ನು ಉತ್ಸಾಹಭರಿತರಾಗಿ ಕಾರ್ಯರೂಪಕ್ಕೆ ತರುವುದು ಸವಾಲಿನ ಕೆಲಸವೆ ಹಾಗೂ ಸಂಪೂರ್ಣವಾಗಿ ಗಮನ ಹರಿಸಬೇಕಾದ ಸಂಗತಿ.

ಪರಿಶೀಲನೆ, ಹಿಮ್ಮಾಹಿತಿ ಮತ್ತು ಇಂಬು ನೀಡುವ ವ್ಯವಸ್ಥೆಗಳು ಬಹುತೇಕ ರಾಜ್ಯಗಳಲ್ಲಿ ನಿಷ್ಕ್ರಿಯವಾಗಿವೆ. ಕಳೆದೆರಡು ದಶಕಗಳಲ್ಲಿ ಶಾಲೆಗಳ ಸಂಖ್ಯೆ ಕ್ಷಿಪ್ರವಾಗಿ ಹೆಚ್ಚಾಗಿದೆ ಆದರೆ ಅದಕ್ಕೆ ತಕ್ಕಹಾಗೆ ಪರಿಶೀಲನೆ ಮತ್ತು ಬೆಂಬಲ ವ್ಯವಸ್ಥೆಗಳು ಬೆಳೆದಿಲ್ಲ. ಇಂತಹ ಕೆಲಸಗಳನ್ನು ಮಾಡಲು ಸೀಮಿತ ಸಂಪನ್ಮೂಲ ಹೊಂದಿರುವ ಬೆರಳೆಣಿಕೆಯಷ್ಟು ಅಧಿಕಾರಿಗಳಿದ್ದಾರೆ. ಶಿಕ್ಷಕರು ಆಯಾ ವರ್ಷದ ಪಠ್ಯಕ್ರಮದಲ್ಲಿ ನಿಗದಿಪಡಿಸಲಾಗಿರುವ ಎಲ್ಲ ಪಾಠಗಳನ್ನು 'ಬೋಧಿಸಿ' ಮುಗಿಸಬೇಕೆಂದು ವ್ಯವಸ್ಥೆ ನಿರೀಕ್ಷಿಸುತ್ತದೆ. ಇದು ಅವರ ಪ್ರಾಥಮಿಕ ಜವಾಬ್ದಾರಿಯನ್ನು ಪೂರ್ತಿಗೊಳಿಸಿದಂತೆ ಎಂದು ತಿಳಿಯಲಾಗುತ್ತದೆ. ಮಕ್ಕಳು ಮತ್ತು ಪೋಷಕರು ಶಿಕ್ಷಕರಿಂದ ನಿರೀಕ್ಷಿಸುವ ಪಾತ್ರಗಳನ್ನು ನಿರ್ವಹಿಸಲು ಶಿಕ್ಷಕರಿಗೆ ಅಧಿಕಾರವಿರುವುದಿಲ್ಲ. ಯಾವುದೇ ರಾಜ್ಯಗಳಲ್ಲೂ ಹೊಸದಾಗಿ ಕೆಲಸಕ್ಕೆ ಸೇರಿದ ಶಿಕ್ಷಕರಿಗೆ ಪೂರ್ವಭಾವಿ ತರಬೇತಿ ಕಾರ್ಯಕ್ರಮಗಳಿಲ್ಲ. ಎಲ್ಲ ಹುದ್ದೆಗಳಿಗೂ ಎರಡು ವರ್ಷದ 'ಪ್ರೊಬೆಷನರಿ/ಪರೀಕ್ಷಾರ್ಥಕ' ಅವಧಿಯಿದ್ದು, ಆನಂತರ ಹುದ್ದೆಯನ್ನು ಖಾಯಂಗೊಳಿಸಿದರೂ ಪ್ರಸ್ತುತ ಈ ಆಚರಣೆಯಿಂದ ಯಾವುದೇ ಉಪಯೋಗವಿಲ್ಲ. ಯಾವುದೇ ಅಧಿಕಾರಿಗಳಾಗಲಿ ಅಥವ ಶಿಕ್ಷಕರಾಗಲಿ ಈ ಅವಧಿಯ ಹಾಗೂ ಈ ಅವಧಿಯ ನಂತರದ ಕೆಲಸದ ರೀತಿಯ ನಡುವೆ ಇರುವ ವ್ಯತ್ಯಾಸಗಳನ್ನು ಹೇಳಲು ಸಾಧ್ಯವಿಲ್ಲ.

ಸರಿಸುಮಾರು ಶೇಕಡ ೪೨ರಷ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ, ಪ್ರಾಥಮಿಕ ತರಗತಿಗಳಿಗೆ ಕೇವಲ ಒಬ್ಬರು ಅಥವ ಇಬ್ಬರು ಶಿಕ್ಷಕರಿದ್ದಾರೆ. ರಾಷ್ಟ್ರಮಟ್ಟದಲ್ಲಿ ಈ ಕುರಿತು ಸ್ಪಷ್ಟವಾಗಿ ನೀತಿಗಳನ್ನು ನಿರ್ದೇಶಿಸಿದ್ದರೂ, ಅಂತರ್ದರ್ಜೆಯ ಬೋಧನೆಯನ್ನು ಪರಿಣಾಮಕಾರಿಯಾಗಿ ಮಾಡಲು ಶಿಕ್ಷಕರು ಸಮರ್ಥರಾಗಿಲ್ಲ. ಎನ್‌ಸಿಎಫ್ ೨೦೦೫ ಶಿಕ್ಷಕರಿಗೆ ಹಲವು ವರ್ಗಗಳನ್ನು ಏಕಕಾಲಕ್ಕೆ ನಿಭಾಯಿಸುವ ಸಂದರ್ಭಗಳನ್ನೆದುರಿಸಲು ಯೋಜನೆಯ ಅಗತ್ಯವಿದೆ ಎಂದು ಹೇಳುತ್ತದೆ, ಆದರೂ ಶಿಕ್ಷಕರ ಶಿಕ್ಷಣ ಪ್ರಕ್ರಿಯೆಯು ಅಂತರ್ದರ್ಜೆಯ ಬೋಧನೆಯ ಸಂದರ್ಭವನ್ನು ಅಸಂಗತವೆಂದು ಪರಿಗಣಿಸುತ್ತದೆ.

ಆರ್‌ಟಿಇ ಹೇಳುವ 'ನಪಾಸು ಮಾಡುವಂತಿಲ್ಲ' ಹಾಗೂ 'ಕಠಿಣ ಶಿಕ್ಷೆ ವಿಧಿಸುವಂತಿಲ್ಲ' ಎನ್ನುವಂತಹ ಹಲವಾರು ನಿಬಂಧನೆಗಳನ್ನು ಶಿಕ್ಷಕರಿನ್ನೂ ಸಂಪೂರ್ಣವಾಗಿ ಒಪ್ಪಿಲ್ಲ. ಒಂಭತ್ತು ರಾಜ್ಯಗಳಲ್ಲಿನ ಶಿಕ್ಷಕರು ಹೇಳಿದ ಪ್ರಕಾರ ಇಂತಹ ನಿಬಂಧನೆಗಳು ಅವರ ವೃತ್ತಿಪರ ಹಕ್ಕಿನ ಮೇಲೆ ಪರಿಣಾಮ ಬೀರುವುದಲ್ಲದೇ ಅವರ ಕೆಲಸಗಳಿಗೆ ಅಡ್ಡಿಯುಂಟುಮಾಡುತ್ತದೆ. ಶಿಕ್ಷಕರು ಮತ್ತು ಹಿರಿಯ ಅಧಿಕಾರಿಗಳು 'ನಪಾಸು ಮಾಡುವಂತಿಲ್ಲ' ಎನ್ನುವ ನಿಬಂಧನೆಯನ್ನು ಟೀಕಿಸುತ್ತ ಇದು ವಿದ್ಯಾರ್ಥಿಗಳ ಓದಬೇಕೆಂಬ ಶ್ರದ್ಧೆಯನ್ನೇ ಹಾಳುಮಾಡುತ್ತದೆ ಎಂದು ಹೇಳುತ್ತಾರೆ. ಮತ್ತೊಂದೆಡೆ ಶಿಕ್ಷಣತಜ್ಞರ ಪ್ರಕಾರ ನಪಾಸು ಮಾಡುವಂತಿಲ್ಲ ಎನ್ನುವ ನೀತಿಯ ತಪ್ಪಾದ ವ್ಯಾಖ್ಯಾನದಿಂದ ಈ ತೊಂದರೆ ಉಂಟಾಗುತ್ತಿದೆ. ಏಕೆಂದರೆ ನಪಾಸು ಮಾಡಬಾರದು ಎನ್ನುವುದನ್ನು ಕಲಿಕೆಯ ಮೌಲ್ಯಮಾಪನ ಮಾಡುವಂತಿಲ್ಲ ಎಂದು ಅರ್ಥೈಸಿಕೊಳ್ಳಲಾಗಿದೆ. ಶಿಕ್ಷಕರು ಕಠಿಣ ಶಿಕ್ಷೆ ನೀಡುವುದನ್ನು ಒತ್ತಾಯದಿಂದ ನಿಲ್ಲಿಸಿದ್ದಾರೆಯೇ ಹೊರತು ಆ ತತ್ವದ ಬಗೆಗಿನ ನಂಬಿಕೆಯಿಂದಲ್ಲ.

ಮುಖ್ಯೋಪಾಧ್ಯಾಯರ ಪರಿಸ್ಥಿತಿ ಅತ್ಯಂತ ಜಟಿಲವಾದದ್ದು. ಅಧ್ಯಯನ ನಡೆಸಿದ ಎಲ್ಲ ರಾಜ್ಯಗಳಲ್ಲೂ ಹಲವು ಮುಖ್ಯೋಪಾಧ್ಯಾಯ / ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಶಾಲೆಯಲ್ಲಿನ ವಿದ್ಯಾರ್ಥಿಗಳ, ಹಣಕಾಸು ಮತ್ತು ಆಡಳಿತಾತ್ಮಕ ದಾಖಲೆಗಳನ್ನು ನಿರ್ವಹಿಸುವುದು; ನಿಯಮಿತವಾಗಿ ಹಾಗೂ ಆಗಾಗ ವರದಿ ಸಲ್ಲಿಸುವುದು; ಶಿಕ್ಷಣ ಇಲಾಖೆಯೊಂದಿಗೆ ಸಂಪರ್ಕದಲ್ಲಿರುವುದು ಇವೇ ಮೊದಲಾದ ಕಾರ್ಯಗಳನ್ನು ಮುಖ್ಯೋಪಾಧ್ಯಾಯರು ನಿರ್ವಹಿಸುತ್ತಾರೆ. ಕಳೆದ ಹತ್ತೂವರೆ / ಹದಿನೈದು ವರ್ಷಗಳಿಂದೀಚೆಗೆ ಮಧ್ಯಾಹ್ನದ ಬಿಸಿಯೂಟ ಮತ್ತು ಕಟ್ಟಡಗಳ ನಿರ್ಮಾಣದಂತಹ ಮಹತ್ತರ ಕೆಲಸಗಳು ಶಾಲೆಯ ಮುಖ್ಯ ಶಿಕ್ಷಕರ ಹೆಗಲೇರಿದೆ. ಈ ಎಲ್ಲ ಚಟುವಟಿಕೆಗಳಿಂದಾಗಿ ಶೈಕ್ಷಣಿಕ ನೆರವು ಮತ್ತು ಪರಿಶೀಲನೆಗೆ ಉಳಿಯುವ ಸಮಯ ಅತ್ಯಲ್ಪ. ಹಲವು ಶಾಲೆಗಳಲ್ಲಿ ಆಡಳಿತ, ಹಣಕಾಸು ಕೆಲಸಗಳಿಗೆ ನೆರವು ನೀಡುವ ಸಿಬ್ಬಂದಿಯಿಲ್ಲದಿರುವುದರಿಂದ ಈ ಸಮಸ್ಯೆ ಇನ್ನಷ್ಟು ತೀವ್ರವಾಗಿದೆ.

ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರನ್ನೊಳಗೊಂಡ ತಂಡಕ್ಕೆ ತಮ್ಮ ಶಾಲೆಗೆ ಯಾರನ್ನು ನೇಮಕ ಮಾಡಬೇಕು ಎಂದು ಹೇಳುವ ಹಕ್ಕಿಲ್ಲ. ಹಲವು ರಾಜ್ಯಗಳಲ್ಲಿ ಶಿಕ್ಷಕರು ನಮಗೆ ಹೇಳಿದ್ದೇನೆಂದರೆ ಅವರಿಗೆ ಗಣಿತದ ಶಿಕ್ಷಕರ ಅವಶ್ಯಕತೆಯಿದ್ದಾಗ ಭಾಷೆಯ ಶಿಕ್ಷಕರನ್ನು ಆ ಶಾಲೆಗೆ ನೀಡಲಾಗಿದೆಯಂತೆ! ಇದರಿಂದಾಗಿ ಪ್ರಾಥಮಿಕ ಶಾಲಾ ಹಂತದಲ್ಲಿ ಶಿಕ್ಷಕರು ಎಲ್ಲ ವಿಷಯಗಳನ್ನು ಬೋಧಿಸಬೇಕು ಎಂದು ನಿರೀಕ್ಷಿಸಲಾಗುತ್ತದೆ. ಅವರುಗಳು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯ ಪಾಲುದಾರರಲ್ಲ. ಬದಲಿಗೆ ಅವರಿಗೆ ಆದೇಶಗಳನ್ನು ನೀಡಿ ಅವರ 'ಕರ್ತವ್ಯ'ಗಳನ್ನು ನಿರ್ವಹಿಸುವಂತೆ ಹೇಳಲಾಗುತ್ತದೆ.

ನಮ್ಮ ಶಾಲೆಗಳನ್ನು ನೋಡಿಕೊಳ್ಳುತ್ತಿರುವವರು, ಸಂಪನ್ಮೂಲಗಳನ್ನು ಒದಗಿಸಿ ಅದರಲ್ಲಿ ಪಾಠ ಮಾಡುತ್ತಿರುವವರೇ ಸರ್ಕಾರಿ ಶಾಲಾ ವ್ಯವಸ್ಥೆಯ ಬಗ್ಗೆ ನಂಬಿಕೆಯಿಲ್ಲ ಎಂದು ಪ್ರತಿಕ್ರಿಯಿಸಿದ್ದು ದುರಂತ. ನಾವು ಭೇಟಿ ಮಾಡಿದ ಯಾವೊಬ್ಬ ಶಿಕ್ಷಕರಾಗಲಿ, ಅಧಿಕಾರಿಗಳಾಗಲಿ ಅಥವ ಬೋಧಕ ಶಿಕ್ಷಕರಾಗಲಿ ತಮ್ಮ ಮಕ್ಕಳನ್ನಾಗಲಿ ಅಥವಾ ಮೊಮ್ಮಕ್ಕಳನ್ನಾಗಲಿ ಸರ್ಕಾರಿ ಶಾಲೆಗೆ ಕಳುಹಿಸಿಲ್ಲ! ಇಡೀ ದೇಶದಲ್ಲಿ ನಮ್ಮ ಶಾಲೆಗಳು, ನಮ್ಮ ಶಿಕ್ಷಕರು ಮತ್ತು ನಮ್ಮ ಮಕ್ಕಳ ಕಲಿಕೆಯ ಬಗೆಗೆ ಮಾತಾಡುವಾಗ ಒಂದು ಬಗೆಯ ಅಸಮಾಧಾನ ಹಾಗೂ ಹತಾಶೆ ಆವರಿಸುತ್ತದೆ. ಆದರೂ ಹಲವು ರಾಜ್ಯಗಳಲ್ಲಿ ತಮ್ಮ ಕೆಲಸದ ಪರಿಸ್ಥಿತಿಗಳು ಹಾಗೂ ಸ್ಥಾನಮಾನದಲ್ಲಿ ಸುಧಾರಣೆ ಕಂಡುಬಂದಿರುವುದಾಗಿ ಶಿಕ್ಷಕರು ಹೇಳಿದರು. ಕಳೆದ ಇಪ್ಪತ್ತು ವರ್ಷಗಳಲ್ಲಿ ಶಾಲೆಯ ಮೂಲಭೂತ ಸೌಕರ್ಯಗಳು ಹಾಗೂ ಉಳಿದ ಸೌಕರ್ಯಗಳು (ರಸ್ತೆಗಳು, ಸಂವಹನ, ವಿದ್ಯುತ್, ನೀರು) ಸಾಕಷ್ಟು ಅಭಿವೃದ್ಧಿ ಹೊಂದಿವೆ. ಸರ್ಕಾರವೂ ಶಿಕ್ಷಕ – ವಿದ್ಯಾರ್ಥಿಗಳ ಸಂಖ್ಯಾನುಪಾತ, ಬೋಧನೆಗೆ  ಅವಕಾಶಗಳು, ಕಲಿಕಾ ಸಾಮಗ್ರಿಗಳು, ಗ್ರಂಥಾಲಯಗಳ ಲಭ್ಯತೆ ಹಾಗೂ ಪುಸ್ತಕಗಳ ಕಡೆ ಗಮನಹರಿಸಿದೆ. ಆರನೇ ವೇತನ ಆಯೋಗದ ಶಿಫಾರಸ್ಸಿನ ನಂತರ ಶಿಕ್ಷಕರ ವೇತನ ಕೂಡ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಳಕಂಡಿದೆ. ಹಲವು ರಾಜ್ಯಗಳು ಗುತ್ತಿಗೆ ಶಿಕ್ಷಕರ  ನೀತಿಗಳನ್ನು ರದ್ದುಮಾಡಿ ಈಗ ಆ ಶಿಕ್ಷಕರನ್ನೆಲ್ಲ ಖಾಯಂಗೊಳಿಸಲಿದೆ.

ಇವೆಲ್ಲವೂ ಬಹಳ ಮುಖ್ಯವಾದ ವಿಷಯಗಳು ಆದರೆ ಶಿಕ್ಷಕರ ಸ್ಥಾನಮಾನ ನಿಕೃಷ್ಟಗೊಂಡಿದೆ ಎನ್ನುವುದು ಎಲ್ಲಕ್ಕಿಂತ ಮುಖ್ಯವಾದದ್ದು. ಎಲ್ಲೆಡೆಯು ನಾವು ಗಮನಿಸಿದ್ದೇನೆಂದರೆ ಶಿಕ್ಷಕರನ್ನು ಸರ್ಕಾರಿ ಶ್ರೇಣೀಕರಣ ವ್ಯವಸ್ಥೆಯಲ್ಲಿ ಕಟ್ಟಕಡೆಯಲ್ಲಿರುವ ನೌಕರರೆಂದು ನೋಡಲಾಗುತ್ತದೆ. ಅಧಿಕಾರಿಗಳು ತಾವು ಆಡಳಿತಾತ್ಮಕ ಪಾತ್ರ ವಹಿಸುತ್ತಿರುವುದರಿಂದ ಶ್ರೇಷ್ಠರು ಎನ್ನುವ ಭಾವನೆ ಹೊಂದಿರುತ್ತಾರೆ. ಶಿಕ್ಷಕರು ಮತ್ತು ಆಡಳಿತಗಾರರ ನಡುವಣ ಸಂಬಂಧ ಸಂಘರ್ಷಮಯವಾಗಿದ್ದು, ಇಬ್ಬರೂ ಕೂಡ ವ್ಯವಸ್ಥೆಯನ್ನು ತಮ್ಮ ಪರವಾಗಿರಿಸಿಕೊಳ್ಳುವ ಪ್ರಯತ್ನದಲ್ಲಿರುತ್ತಾರೆ. ಶಿಕ್ಷಕರು ಆಡಳಿತಾತ್ಮಕ ಹುದ್ದೆಗಳಿಗೆ ಬಡ್ತಿಯನ್ನು ಕಾತರದಿಂದ ಕೋರುತ್ತಿರುವುದೂ  ಆಶ್ಚರ್ಯದ ವಿಷಯವಲ್ಲ.

ಒಂದು ಮಟ್ಟದಲ್ಲಿ ಬಹಳಷ್ಟು ಬದಲಾದಂತೆ ತೋರುತ್ತದೆ. ಎಲ್ಲ ರಾಜ್ಯಗಳೂ ಆರ್‌ಟಿಇ ಶಿಫಾರಸ್ಸು ಮಾಡಿರುವ ಶಿಕ್ಷಕ ಅರ್ಹತಾ ಪರೀಕ್ಷೆ (Teacher Eligibility Tests (TET)) ಯನ್ನು ಅಳವಡಿಸಿಕೊಂಡಿದೆ. ಆದರೆ ಇದು ತಮ್ಮ ವಿಷಯ ಜ್ಞಾನದಲ್ಲಿ ಮತ್ತು ಶಿಕ್ಷಣಶಾಸ್ತ್ರದಲ್ಲಿ ಪರಿಣತಿಗಳಿಸಿರುವ ಶಿಕ್ಷಕರನ್ನು ನೇಮಿಸಿಕೊಳ್ಳಲು ಸರ್ಕಾರಕ್ಕೆ ಸಹಾಯ ಮಾಡುತ್ತದೆಯೇ ಎನ್ನುವುದನ್ನು ಅರಿಯಲು ಸಾಧ್ಯವಾಗಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅಧ್ಯಯನ ನಡೆಸಿದ ಒಂಭತ್ತೂ ರಾಜ್ಯಗಳಲ್ಲಿ ಟಿಇಟಿ ಫಲಿತಾಂಶಗಳನ್ನು ಬಳಸಿ ಸೇವಾ ಪೂರ್ವ ತರಬೇತಿ, ಪಠ್ಯಕ್ರಮ ಪರಿಷ್ಕರಣೆ ಮತ್ತು ಸೇವಾ ಪೂರ್ವ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಮೌಲ್ಯಮಾಪನ ಮಾಡಲು ಯಾವುದೇ ಬಗೆಯಲ್ಲೂ ಪ್ರಯತ್ನಿಸಿಲ್ಲ. ಈ ಪರೀಕ್ಷೆಯನ್ನು ಯಾವುದೇ ಸಂದೇಹಗಳಿಲ್ಲದೆ ಬರೆಯಲಾಗುವುದೇ, ಈ ಪರೀಕ್ಷೆ ತಾನು ಹೇಳುವಂತೆ ಶಿಕ್ಷಕರ ಜ್ಞಾನ ಮತ್ತು ಕೌಶಲ್ಯವನ್ನು ನಿಖರವಾಗಿ ಅಳೆಯುತ್ತದೆಯೇ, ಕಾಲಾಂತರದಲ್ಲಿ ಕೂಡ ಈ ಪರೀಕ್ಷೆ ತಾಳಿಕೆಯ ಗುಣ ಹೊಂದಿದೆಯೇ ಎನ್ನುವ ಕುರಿತು – ವಿವಿಧ ರಾಜ್ಯಗಳಲ್ಲಿ ಟಿಇಟಿ ಗುಣಮಟ್ಟದ ಬಗ್ಗೆ ತಿಳಿದಿರುವುದೇ ಅತ್ಯಲ್ಪ.

ಅಂತಿಮವಾಗಿ ಶಿಕ್ಷಕರೆಷ್ಟು ಪರಿಣಾಮಕಾರಿಯಾಗಿದ್ದಾರೆ ಎನ್ನುವುದು ಅವರು ಪಾಠ ಮಾಡುವ ಎಲ್ಲ ಮಕ್ಕಳು ತಮ್ಮ ಶೈಕ್ಷಣಿಕ ಸಾಮರ್ಥ್ಯವನ್ನು ಪಡೆದಿರುವರೇ ಎನ್ನುವುದನ್ನು ಆಧರಿಸಿರುತ್ತದೆ. ಶಿಕ್ಷಕರು ಹೆಚ್ಚು ಪರಿಣಾಮಕಾರಿಯಾಗಿ ಬೋಧಿಸುತ್ತಿರುವರೇ ಎನ್ನುವುದನ್ನು ಸಂಕೀರ್ಣವಾದ ನೀತಿಗಳು ಮತ್ತು ಪದ್ಧತಿಗಳಿಂದ ನಿರ್ಧರಿಸಲಾಗುತ್ತಿದೆ. ಶಿಕ್ಷಕರನ್ನು ನಿಂದಿಸುವುದು ಸುಲಭ, ಹೆಚ್ಚು ಕಷ್ಟಕರವಾದದ್ದೆಂದರೆ ವ್ಯವಸ್ಥೆಯೊಂದಿಗೆ ಹೆಣಗಾಡುತ್ತಲೇ ಶಾಲೆಗಳ ಸ್ವಾಯತ್ತತೆಯನ್ನು ಉಳಿಸಿಕೊಳ್ಳುವುದು ಹಾಗೂ ಅದೇ ಸಮಯದಲ್ಲಿ ಶಿಕ್ಷಕರು, ಮುಖ್ಯೋಪಾಧ್ಯಾಯರು / ಪ್ರಾಂಶುಪಾಲರು ಮತ್ತು ಆಡಳಿತಗಾರರು ತಮ್ಮ ಕೆಲಸವನ್ನು ವಿಮರ್ಶೆ ಮಾಡಿಕೊಳ್ಳುತ್ತಾ ಮಕ್ಕಳ ವಿಷಯದಲ್ಲಿ ಜವಾಬ್ದಾರಿಯಿಂದ ವರ್ತಿಸುವುದು.

ವಿಮಲಾ ರಾಮಚಂದ್ರನ್, ಶೈಕ್ಷಣಿಕ ಸಂಪನ್ಮೂಲ ವಿಭಾಗ, ಹೊಸ ದೆಹಲಿ, ಇವರು ಮಹಿಳಾ ಸಮಖ್ಯದ(ಮಹಿಳಾ ಸಮಾನತೆಗಾಗಿ ಶಿಕ್ಷಣ) ಕಲ್ಪನೆಯ ಹುಟ್ಟಿನೊಂದಿಗೆ ತೊಡಗಿಸಿಕೊಂಡವರು ಮತ್ತು ಅದರ ಮೊದಲ ರಾಷ್ಟ್ರೀಯ ನಿರ್ದೇಶಕರಾಗಿ 1988-93ರಲ್ಲಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದಲ್ಲಿ ಜವಾಬ್ದಾರಿ ನಿರ್ವಹಿಸಿದ್ದರು. ಶೈಕ್ಷಣಿಕ ಸಂಪನ್ಮೂಲ ವಿಭಾಗವನ್ನೂ (ಇಆರ್‌ಯು ಕನ್ಸಲ್ಟಂಟ್ಸ್ ಎಂದು ಈಗ ಹೆಸರಾಗಿದೆ) ಇವರು ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧಕರು ಮತ್ತು ತೊಡಗಿಸಿಕೊಂಡಿರುವವರ ಜಾಲವನ್ನಾಗಿ ಹುಟ್ಟುಹಾಕಿದರು. ಎನ್‌ಯುಇಪಿಎನಲ್ಲಿ ಶಿಕ್ಷಕ ನಿರ್ವಹಣೆ ಮತ್ತು ಅಭಿವೃದ್ಧಿಯಲ್ಲಿ ರಾಷ್ಟ್ರೀಯ ಫೆಲೋ ಮತ್ತು ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಇವರು ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಲಿಂಗ ಮತ್ತು ಸಮಾನತೆಯ ಸಮಸ್ಯೆಗಳು, ಶಿಕ್ಷಕರ ಸ್ಥಾನ ಮತ್ತು ಸ್ಫೂರ್ತಿ, ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಯ ನೀತಿ ಮತ್ತು ಯೋಜನೆಗಳಲ್ಲಿ

ಸಮಾನತೆಯ ಗುರಿಗಳನ್ನು ಮುಟ್ಟಲು ಇರುವ ಅಡೆತಡೆಗಳು, ವಯಸ್ಕರ ಅಕ್ಷರಜ್ಞಾನ, ಶಿಕ್ಷಣದ ಮುಂದುವರಿಕೆ ಇವುಗಳ ಬಗ್ಗೆ ಸಂಶೋಧನೆಯನ್ನು ಮಾಡಿದ್ದಾರೆ ಮತ್ತು ಇತ್ತೀಚೆಗೆ ಶಾಲೆಯಿಂದ ಹೊರಗುಳಿದ ಯುವ ಪೀಳಿಗೆಯ ಅದರಲ್ಲೂ ಹೆಣ್ಣು ಮಕ್ಕಳ ಅಗತ್ಯಗಳು, ಇದರ ಬಗ್ಗೆ ಸಂಶೋಧನೆಯಲ್ಲಿ ನಿರತರಾಗಿದ್ದಾರೆ. vimalar.ramachandran@gmail.com ಮೂಲಕ ಅವರನ್ನು ಸಂಪರ್ಕಿಸಬಹುದು.